ಗುರುತಿಸಿಕೊಂಡು ಮುಂದುವರೆ' ಎಂದು ಹೇಳಿದರು. ಹಾಗೆ ನಾನು ಗುರು ರಮಣಿ ರಂಜನ್ ಜೈನ ಅವರಬಳಿ ಒಡಿಸ್ಸಿ ನೃತ್ಯ ಕಲಿಯಲು ಆರಂಭಿಸಿದೆ. ಆದರೇನು ಮಾಡೋಣ, ನನ್ನ ಗುರುಗಳು ಸ್ವಲ್ಪ ಸಮಯದಲ್ಲಿಯೇ ಭುವನೇಶ್ವರಕ್ಕೆ ಹೊರಟು ಹೋದರು. ಒಡಿಸ್ಸಿ ಕಲಿಕೆಯನ್ನು ಮುಂದುವರೆಸಲು ಯಾವುದಾದರೂ ಅವಕಾಶವಿದೆಯೇ ಎಂದು ನಾನು ನಿರೀಕ್ಷಿಸುತ್ತಲೇ ಇದ್ದೆ. ಅಷ್ಟರಲ್ಲಿ ಒಡಿಸ್ಸಿಯ ಮಹಾನ್ ಚೇತನ, ಗುರುಗಳಾದ ಕೇಳುಚರಣ್ ಮೊಹಪಾತ್ರ ಅವರೊಮ್ಮೆ ಕಲಾಕ್ಷೇತ್ರಕ್ಕೆ ಬಂದಿದ್ದರು. ಅವರನ್ನು ಕಂಡು ಮಾತನಾಡುವ ಅವಕಾಶ ಸಿಕ್ಕಾಗ, ನನ್ನ ಆಸೆಯನ್ನು ಹೇಳಿಕೊಂಡೆ. ಅವರು ಕಟಕ್‌ನಲ್ಲಿ ಬೇಸಿಗೆಯ ಮೇ ತಿಂಗಳಲ್ಲಿ ಒಂದು ತಿಂಗಳು ಒಡಿಸ್ಸಿ ತರಗತಿಯನ್ನು ಕಲಿಸುವುದಾಗಿ ಹೇಳಿದರು. ಇದು ನನಗೆ ದೊರೆತ ಭಾಗ್ಯವೇ ಸರಿ ಎಂದು ನಾನು ಅಲ್ಲಿಗೆ ಹೋದೆ.

**◆ ಒಂದು ತಿಂಗಳ ಅವಧಿಯಲ್ಲಿ ಗುರುಗಳು ನೀಡುತ್ತಿದ್ದ ತರಬೇತಿಯ ಸ್ವರೂಪ ಹೇಗಿತ್ತು?**

**ಗುರುಗಳ ಒಡನಾಟದ ನೆನಪುಗಳನ್ನು ಹೇಳುವಿರಾ?**

ಇದು ಪ್ರತೀ ವರ್ಷ ನಡೆಯುವ ಶಿಬಿರ. ಬೆಳಗ್ಗಿನಿಂದ ಮಧ್ಯರಾತ್ರಿಯವರೆಗೆ ತೀವ್ರತರವಾದ, ನಿರಂತರ ತರಬೇತಿ ನಡೆಯುತ್ತಿತ್ತು. ಅಲ್ಲಿನ 45 ಡಿಗ್ರಿ ಉಷ್ಣತೆಯಲ್ಲಿ ನೃತ್ಯ ಅಭ್ಯಾಸ ಸುಲಭವಲ್ಲ. ಆದರೆ ವಯಸ್ಸಿನ ಬಲದಲ್ಲಿ, ಆಸಕ್ತಿಯಿಂದ ಅದನ್ನೆಲ್ಲ ಸಹಿಸಿಕೊಂಡು ನಿರಂತರ ಅಭ್ಯಾಸ ಮಾಡುವುದು ನನಗೆ ಕಷ್ಟವಾಗಲಿಲ್ಲ. ಹಳೆಯ ಗುರುಕುಲ ಶೈಲಿಯಲ್ಲಿ ವಸತಿ ವ್ಯವಸ್ಥೆಯಿತ್ತು. ಅತ್ಯಂತ ಕಡಿಮೆ ಸಂಪನ್ಮೂಲಗಳಲ್ಲಿ ದಿನಗಳನ್ನು ಕಳೆಯಬೇಕಿತ್ತು. ತರಗತಿಯೆಂದರೆ ಮೈ ಮುರಿಯುವಷ್ಟು ಅಭ್ಯಾಸ ಮಾಡುತ್ತಲೇ ಇರಬೇಕು. ಬೆಳಗ್ಗೆ 10 ಗಂಟೆಗೆ ಆರಂಭವಾಗುವ ತರಗತಿ ರಾತ್ರಿ ಹತ್ತು ಗಂಟೆಯವರೆಗೂ ಸಾಗುತ್ತಿತ್ತು. ಗುರುಗಳು ಬಹಳ ಸಿಟ್ಟಿನ ಸ್ವಭಾವದವರು. ಆದರೆ ಒಂದು ಕ್ಷಣವೂ ವ್ಯರ್ಥ ಮಾಡದೇ ನೃತ್ಯಕ್ಕಾಗಿ ತಮ್ಮ ಜೀವನ ಸಮರ್ಪಿಸಿಕೊಂಡಿದ್ದರು. ನೃತ್ಯ ಹೇಳಿ ಕೊಡುವುದು, ಕೊರಿಯೊಗ್ರಫಿ ಮಾಡುವುದು,

